# ಕೃಷಿ ಅರಣ್ಯಕ್ಕೆ ಸೂಕ್ತವಾದ ಮರಗಿಡಗಳು

**ವೆಂಕಟೇಶ್ ಎಲ್. ಮತ್ತು ಸಂತೋಷ ಎಚ್. ಎಮ್.**
ಕೃಷಿ ವಿಜ್ಞಾನ ಕೇಂದ್ರ, ಶಿರಸಿ – 581 401
☎: 9482023466 **ಮಿಂಚಂಚೆ:** venkatesh1@uasd.in

**ಕೃಷಿಗೆ ಪೂರಕವಾಗಿ ಅರಣ್ಯ ಮೂಲದ ಮರಗಿಡಗಳು ಕೃಷಿಕನ ಆದಾಯವನ್ನು ಹೆಚ್ಚಿಸಬಲ್ಲವು. ಅರಣ್ಯದಲ್ಲಿ ಅಥವಾ ಬಂಜರು ಭೂಮಿಯಲ್ಲಿ ಬೆಳೆಸಬಹುದಾದ ಕೆಲವು ಗಿಡಮರಗಳು ಹಣ್ಣು ನೀಡುತ್ತವೆ, ಮೇವನ್ನು ನೀಡುತ್ತವೆ...... ಹೀಗೆ ಹತ್ತು ಹಲವಾರು ಕಾರ್ಯಗಳಿಗೆ ಅತ್ಯಂತ ಉಪಯುಕ್ತವಾಗಿವೆ. ಭೌಗೋಳಿಕ ಭಿನ್ನತೆಯ ಹಿನ್ನೆಲೆಯಲ್ಲಿ ವಲಯವಾರು ಕೃಷಿಯನ್ನು ಕೈಕೊಳ್ಳಬೇಕಾಗುತ್ತದೆ. ಹೆಚ್ಚಿನ ಮಾಹಿತಿಯನ್ನು ಈ ಲೇಖನದಲ್ಲಿ ಪಡೆಯಬಹುದು.**

ಸಾಮಾನ್ಯವಾಗಿ ಬೆಳೆಯುವ ಎಲ್ಲಾ ಮರಗಿಡಗಳು ಕೃಷಿ ಅರಣ್ಯಕ್ಕೆ ಸೂಕ್ತವೆನಿಸುವುದಿಲ್ಲ. ಆದುದರಿಂದ ಮರಗಳನ್ನು ಆಯ್ಕೆಮಾಡುವಾಗ ಕೆಲವೊಂದು ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ.

ಬಹು ಉಪಯೋಗಿ ಗಿಡಮರಗಳಾಗಿರಬೇಕು. ಸುಲಭವಾಗಿ ಎಬ್ಬಿಸುವಂತಿರಬೇಕು. ಚೆನ್ನಾಗಿ ಬೆಳೆದು ಬಹು ಬೇಗ ಕಟಾವಿಗೆ ಬರುವಂತಿರಬೇಕು. ಪ್ರತಿಕೂಲ ಪರಿಸ್ಥಿತಿಗಳನ್ನು ಎದುರಿಸಿ ಬೆಳೆಯುವಂತಿರಬೇಕು. ಜಾನುವಾರುಗಳು ಮೇಯ್ದಾಗ ಮರು ಚಿಗುರಿ ಬೆಳೆಯುವಂತಿರಬೇಕು. ಉತ್ತಮ ಮಾರಾಟ ಬೆಲೆ ಸಿಗುವಂತಿರಬೇಕು. ಹೆಚ್ಚಿನ ಇಳುವರಿ ಕೊಡುವಂತಿರಬೇಕು

**ಬಹುಉಪಯೋಗಿ ಮರಗಳು**

**ಉರುವಲು-ಕಟ್ಟಿಗೆ ನೀಡುವ ಮರಗಳು:** ಸರ್ವೆ, ಹೊಂಗೆ, ಹಳದಿ ಜಾಲಿ, ದಿಂಡಿಗ, ಸೀಮೆತಂಗಡಿ ಮುಂತಾದವು

**ಮೇವಿನ ಮರಗಳು:** ಸುಬಾಬುಲ್, ಜಾಲಿ, ಆಲ, ಅರಳಿ, ನೇರಳೆ, ಅಗಸೆ, ಹಿಪ್ಪೆ, ಕಾಡು ಹುಣಿಸೆ, ಬೇವು, ಕ್ಯಾಲಿಯಾಂಡ್ರಾ, ಹೆಬ್ಬೇವು ಮುಂತಾದವು

**ಸೊಪ್ಪಿನ ಗೊಬ್ಬರದ ಮರಗಳು:** ಹೊಂಗೆ, ಹೂವರಸಿ, ಗ್ಲಿರಿಸೀಡೀಯಾ, ಬೇವು, ಸೀಮೆ ತಂಗಡಿ, ಹಳದಿ ಜಾಲಿ, ಮಳೆಮರ, ಲಕ್ಕಿ ಸೊಪ್ಪು, ಕೊಂಡಮಾವು

**ಹಣ್ಣು ನೀಡುವ ಮರಗಳು:** ಹುಣಿಸೆ, ಬೇಲ, ಹಲಸು, ಸೀತಾಫಲ, ಮಾವು, ಪನ್ನೇರಳೆ

**ಎಣ್ಣೆ ಮರಗಳು ಮತ್ತು ಸುಗಂಧ ತೈಲ ಸಸ್ಯಗಳು:** ಹೊಂಗೆ, ನಿಂಬೆಹುಲ್ಲು ಬೇವು, ಸೊಯಾ ಅವರೆ, ಜಟ್ರೋಪ, ಬರ್ಸೆರಾ, ಬೇವು, ಕರ್ಪೂರದ ಮರ, ಹಿಪ್ಪೆ, ಹಾಲು ಮಡ್ಡಿ, ಸಿಮರೂಬ, ಧೂಪದ ಮಡ್ಡಿ, ನೀಲಗಿರಿ ಸಿಟ್ರಿಯೋಡೋರಾ

**ಔಷಧಿ ಮರಗಿಡಗಳು:** ಬೇವು, ತಾರೆ, ನೇರಳೆ, ಆಮ್ಲ/ ಬೆಟ್ಟದ ನೆಲ್ಲಿ, ಅಮೃತಬಳ್ಳಿ, ನೆಲ ಬೇವು, ಅಳಲೆ, ಕೊಡಸೀಗೆ, ಬಿಲ್ವಪತ್ರೆ

**ಕೃಷಿ ಉಪಕರಣಗಳಿಗೆ ಉಪಯೋಗಿಸುವ ಮರಗಿಡಗಳು:** ಬೊಂಬು/ಬಿದಿರು, ನೀರಂಜಿಮರ, ಕತ್ತಾಳೆ, ಬೆಪ್ಪಾಲೆ, ಹೊಂಗೆ, ಅಂಕೋಲೆ, ನೊಗಮರ, ಬಿಲ್ವಾರ

**ಗಳಿಗಳಿಗೆ ಉಪಯೋಗಿಸುವ ಮರಗಳು:** ಬೊಂಬು, ಸರ್ವೆ, ನೀಲಗಿರಿ

**ದಿಮ್ಮಿ/ ನಾಟಾ ನೀಡುವ ಮರಗಳು:** ತೇಗ/ ಸಾಗುವಾನಿ, ನೇರಳೆ, ಕರಿಮರ, ಹೂವರಸಿ, ತಾರೆ, ಹಳದಿ ಜಾಲಿ, ಮತ್ತಿ, ಮಹಾಗನಿ, ಶಿವನೆ, ಆಲ, ನಂದಿ, ಬಾಗೆ, ಹೊನ್ನೆ, ಹಲಸು, ಹೆಬ್ಬೇವು, ಮಾವು, ಬೇವು, ಸಿಲ್ವರ್ ಓಕ್, ಕರಿಜಾಲಿ

**ಗಾಳಿ ತಡೆ ಮರಗಳು:** ಸಿಲ್ವರ್ ಓಕ್, ಸರ್ವೆ

**ಮಣ್ಣಿನ ಸವಕಳಿ ತಡೆಯುವ ಮರಗಿಡಗಳು:** ಬೊಂಬು/ ಬಿದಿರು, ಹೊಂಗೆ, ಕತ್ತಾಳೆ, ಸೀಮೆ ತಂಗಡಿ

**ಕಾಗದ, ರೆಯಾನ್, ಪ್ಲೈವುಡ್ ಕಾರ್ಖಾನೆಗಳಿಗೆ ಪಲ್ಲು ನೀಡುವ ಮರಗಳು:** ನೀಲಗಿರಿ, ಸಿಲ್ವರ್ ಓಕ್, ಸುಬಾಬುಲ್, ಬೂರುಗದ ಮರ, ಹೆಬ್ಬೇವು, ಮೂಸಿ ಮರ

**ಅತ್ಯಂತ ಬೆಲೆಬಾಳುವ ಮರಗಳು,** ಶ್ರೀಗಂಧ, ಸಾಗುವಾನಿ, ರಕ್ತ ಚಂದನ, ಹೊನ್ನೆ, ಬೀಟೆ

**ವಲಯಗಳ ವಿವರಣೆ**

**ವಲಯ 3**. ಉತ್ತರ ಶುಷ್ಕ ವಲಯ (ಕೊಪ್ಪಳ, ಗದಗ, ಧಾರವಾಡ, ಬೆಳಗಾವಿ, ಬಾಗಲಕೋಟ, ಬಳ್ಳಾರಿ, ದಾವಣಗೆರೆ, ರಾಯಚೂರು,)

**ವಲಯ 8**. ಉತ್ತರ ಪರಿವರ್ತನೆ ವಲಯ (ಬೆಳಗಾವಿ, ಧಾರವಾಡ, ಹಾವೇರಿ, ಗದಗ,)

**ವಲಯ 9**. ಗುಡ್ಡಗಾಡು ವಲಯ (ಉತ್ತರಕನ್ನಡ, ಬೆಳಗಾವಿ, ಧಾರವಾಡ, ಹಾವೇರಿ, ಶಿವಮೊಗ್ಗ, ಚಿಕ್ಕಮಗಳೂರ, ಕೊಡಗು, ಹಾಸನ)

**ವಲಯ 10**. ಕರಾವಳಿ ವಲಯ (ಉತ್ತರಕನ್ನಡ, ಬೆಳಗಾವಿ, ಧಾರವಾಡ, ಹಾವೇರಿ, ಶಿವಮೊಗ್ಗ, ಚಿಕ್ಕಮಗಳೂರ, ಕೊಡಗು, ಹಾಸನ)

**ವಿವಿಧ ಕೃಷಿ ವಲಯಗಳಿಗೆ ಸೂಕ್ತವಾದ ಮರಗಳು**

| ಮರ ಜಾತಿಗಳು | ವಲಯ | ಮರ ಜಾತಿಗಳು | ವಲಯ |
|---|---|---|---|
| ಬೆಂಗಾಳಿ ಜಾಲಿ | 3,8,9 | ಅರಳಿ | ಎಲ್ಲಾ ವಲಯಗಳಿಗೆ |
| ಕರಿಜಾಲಿ | 3,8,9 | ಗೊಬ್ಬರದ ಗಿಡ | ಎಲ್ಲಾ ವಲಯಗಳಿಗೆ |
| ಸರ್ವೆ | 3,8,9,10 | ಸಿಲ್ವರ್ ಓಕ್ | 3,8,9,10 |
| ಮೂಸಿ ಮರ | 3,9,10 | ಶಿವನೆ ಮರ | 3,8,9 |
| ಚುಜ್ಜಲು | 3,8,10 | ಕಮರ | 3,8 |
| ಬಾಗೆ | 3,8,9 | ತಪಸಿ ಮರ | 3,8,9 |
| ಬಿಲ್ವಪತ್ರೆ | 3,8,9,10 | ಸುಬಾಬುಲ್ | 3,8,9,10 |
| ಗೋಡಂಬಿ | 3,8,9,10 | ಹಿಪ್ಪೆ | 3,8,9,10 |
| ಸೀತಾಫಲ | 3,8,9 | ಹೆಬ್ಬೇವು | 3,8,9 |
| ಹಲಸು | ಎಲ್ಲ ವಲಯಗಳಿಗೆ | ಸೀಮೆ ಹುಣಿಸೆ | 3,8,9 |
| ಬೇವು | 3,8,9 | ಹೊಂಗೆ | ಎಲ್ಲಾ ವಲಯಗಳಿಗೆ |
| ಕಂಚುವಾಳ | 3,8,9 | ಹೊನ್ನೆ | 3,8,9,10 |
| ತಾಳೆ ಮರ/ ತಾಟಿನಿಂಗು | 3,8 | ರಕ್ತ ಚಂದನ | 3,8,9 |
| ಮುತ್ತುಗ | 3,8,9, | ಶ್ರೀಗಂದ | 3,8,9 |
| ಕಕ್ಕೆ ಮರ | 3,8,9,10 | ಸಾಗುವಾನಿ | 3,8,9,10 |
| ಸೀಮೆ ತಂಗಡಿ | 1,3,8,9 | ಅಂಟುವಾಳ | 8,9,10 |
| ಸರ್ವೆಮರ | 4,5,6,7,10 | ಸಿಮರೂಬ | 8,9,10 |
| ಸೀಮೆಬೂರುಗ | ಎಲ್ಲಾ ವಲಯಗಳಿಗೆ | ಕಾಡು ಅಮಟೆ | 8,9,10 |
| ಕ್ಯಾಲಿಯಾಂಡ್ರ | 3,9,10 | ನೇರಳೆ | ಎಲ್ಲಾ ವಲಯಗಳಿಗೆ |
| ಕೊಂಡಮಾವು | 4,5.6 | ಮಹಾಗನಿ | 3,8,9, |
| ಕರಿಮರ | ಎಲ್ಲಾ ವಲಯಗಳಿಗೆ | ಹುಣಿಸೆ | ಎಲ್ಲಾ ವಲಯಗಳಿಗೆ |
| ಕಿರುಬಿದಿರು | ಎಲ್ಲಾ ವಲಯಗಳಿಗೆ | ಮತ್ತಿ | 8,9,10 |
| ಬೆಟ್ಟನಲ್ಲಿ | ಎಲ್ಲಾ ವಲಯುಗಳಿಗೆ | ತಾರೆ | 8,9,10 |
| ನೀಲಗಿರಿ ಹೈಬ್ರಿಡ್ | 3 | ಹೂವರಸಿ | 3,8,9 |
| ಬೇಲ | 3,8,9, | ಆಲೆ ಮರ | 3,8,9,10 |
| ಆಲ | 3,8,9 | ಗೋಣಿಮರ | 3,8,9,10 |

****